**<u>ದಿನಾಂಕಃ28.10.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಹೆಚ್ ಎಸ್ ಹೆಚ್ ವಕೀಲರಿಂದಃ-</u>**

ನಾನು 10ನೇ ತರಗತಿಯವರೆಗೂ ಓದಿದ್ದೇನೆ, ಕನ್ನಡ ಓದಲು ಬರೆಯಲು ನನಗೆ ಬರುತ್ತದೆ. ದಾವಾ ಪತ್ರದಲ್ಲಿರುವ ಅಂಶಗಳು ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ದಾವಾ ಆಸ್ತಿಯನ್ನುತ ಮಗೆ ಮಾರಾಟ ಮಾಡುತ್ತೇವೆಂದು ತಮ್ಮ ಬಳಿ ಯಾರು ಬಂದು ತಿಳಿಸಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿಯು ಚಿಕ್ಕತಾಯಮ್ಮ, ಯೋಗೇಶ ಮತ್ತು ನಂದಕುಮಾರ ಎನ್ನುತ್ತಾರೆ. ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇವೆಂದು ಮಾತು ಕತೆಗೆ ಯಾರು ಯಾರು ಸೇರಿದ್ದರೆಂದರೆ ಸಾಕ್ಷಿಯು ಪ್ರತಿವಾದಿಯರು, ಪರಮೇಶ್ವರ್ ಎಸ್ ಸಿ ಮರೀಗೌಡ, ಮರಿಸ್ವಾಮಿ ಅವರು ಸೇರಿದ್ದರು. ಯಾವ ದಿನಾಂಕದಂದು ಮಾತು ಕತೆ ಆಯಿತೆಂದು ಕೇಳಲಾಗಿ ಸಾಕ್ಷಿಯು ಕ್ರಯದ ಕರಾರು ಪತ್ರ ಆಗುವ ಒಂದು ವಾರ ಮೊದಲು ಎನ್ನುತ್ತಾರೆ. ಒಂದು ಗುಂಟೆಗೆ ಎಷ್ಟು ರೂಪಾಯಿ ಮೌಲ್ಯ ನಿಗದಿ ಆಗಿತ್ತು ಎಂದರೆ ಸಾಕ್ಷಿ ಯು 18 ಗುಂಟೆ ಒಟ್ಟು 2,25,000/- ಸಾವಿರಕ್ಕೆ ಮಾತು ಕತೆ ಆಗಿತ್ತು ಎನ್ನುತ್ತಾರೆ. ದಾವಾ ಸರ್ವೆ ನಂಬರ್ ಆಸ್ತಿಯಲ್ಲಿ ಪ್ರತಿವಾದಿ 2 ಮತ್ತು 3 ರವರಿಗೆ ಯಾವ ರೀತಿಯ ಹಕ್ಕು ಇದೆ ಎಂದು ಕರಯದ ಕರಾರು ಪತ್ರ ಆಗುವ ಕಾಲಕ್ಕೆ ತಿಳಿದುಕೊಂಡಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ನಮಗೆ ವಿಲ್ ಮೂಲಕ ದಾವಾ ಅಸ್ತಿಯು ಬಂದಿರುತ್ತದೆ ಎಂದು ಪ್ರತಿವಾದಿ 2 ಮತ್ತು 3ರವರು ತಿಳಿಸಿರುತ್ತಾರೆ. ಕ್ರಯ ಕರಾರು ಪತ್ರ ಆಗುವ ಕಾಲಕ್ಕೆ ದಾವಾ ಆಸ್ತಿಯು ಯಾರ ಹೆಸರಿಗೆ ಖಾತೆ ಇತ್ತು ಎಂದು ತಿಳಿದುಕೊಂಡಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು 1ನೇ ಪ್ರತಿವಾದಿ ಚಿಕ್ಕತಾಯಮ್ಮರವರ ಹೆಸರಿಗೆ ಖಾತೆ ಇತ್ತು ಎನ್ನುತ್ತಾರೆ. ಕ್ರಯ ಕರಾರು ಪತ್ರದಲ್ಲಿ ಪ್ರತಿವಾದಿ 2 ಮತ್ತು 3ರವರಿಬ್ಬರೇ ದಾವಾ ಸರ್ವೆ ನಂಬರ್ ಅಸ್ತಿಯಲ್ಲಿ 18 ಗುಂಟೆ ಕ್ರಯ ಮಾಡಿಕೊಡುತ್ತೇವೆಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಸರ್ವೆ ನಂಬರ್ 42/1 ವಿಸ್ತೀರ್ಣ 36 ಗುಂಟೆ ಪೈಕಿ 18 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖಾತೆ ಪಹಣಿ ಪ್ರತಿವಾದಿ 2 ಮತ್ತು 3ರವರ ಹೆಸರಿಗೆ ನಮೂದು ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಪ್ರತಿವಾದಿ 1ರವರು ಪ್ರತಿವಾದಿ 2 ಮತ್ತು 3ರವರ ಜೊತೆ ಬಂದು 36 ಗುಂಟೆ ಜಮೀನಿನ ಪೈಕಿ 18 ಗುಂಟೆ ಜಮೀನನ್ನು ಮಾರಾಟ ಮಾಡುತ್ತೇವೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ 2 ಮತ್ತು 3 ನನ್ನಿಂದ

2,25,000/- ಹಣವನ್ನು ಕೈ ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ 2,25,000/-ಕ್ಕೆ ನಾನು ಪ್ರತಿವಾದಿಯರಿಂದ ಮಾಸಿಕ ಬಡ್ಡಿ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3ರವರು ನನಗೆ 1,50,000/- ಹಣವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಪ್ರತಿವಾದಿಯರು ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ಕ್ರಯದ ಕರಾರು ಪತ್ರದ ಷ್ಪೆಡ್ಯೂಲ್ ನಲ್ಲಿ ಪ್ರತಿವಾದಿ 2 ಮತ್ತು 3ರವರಿಗೆ ಸೇರಿದ 18 ಗುಂಟೆ ಜಮೀನನ್ನು ಮಾತ್ರ ಮಾರಾಟ ಮಾಡುವುದಾಗಿ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿದೆ ಎಂದರೆ ಸರಿ. ನಿಪಿ-1 ಕರಾರು ಪತ್ರದಲ್ಲಿ ದಾವಾ ಸರ್ವೆ ನಂಬರ್ 18 ಗುಂಟೆ ಆಸ್ತಿಯು ಚಿಕ್ಕತಾಯಮ್ಮರವರಿಗೆ ಸೇರಿದ್ದು ಎಂದು ಎಲ್ಲೂ ನಮೂದು ಇಲ್ಲ ಎಂದರೆ ಸರಿ. ಕ್ರಯುದ ಕರಾರು ಪತ್ರ ಮಾಡಿಕೊಳ್ಳಲು ದಾವಾ ಅಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಯಾರು ತಮಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರು ಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಪಿ-1 ಕರಾರು ಪತ್ರದಲ್ಲಿ ಇರುವ ಒಕ್ಕಣೆಯನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಯರೇ ಎನ್ನುತ್ತಾರೆ. ನಿಪಿ-1 ಕರಾರು ಪತ್ರವನ್ನು ಪತ್ರ ಬರಹಗಾರರ ಬಳಿ ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಾವು ವಕೀಲರ ಮೂಲಕ ಕಳುಹಿಸಿದ ನೋಟೀಸ್ ತಲುಪಿದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿಯರಿಗೆ ನೋಟೀಸ್ ಕೊಡಿಸುವ ಪೂರ್ವದಲ್ಲಿ ಖುದ್ದು ಭೇಟಿಯಾಗಿ ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿ ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಅಸ್ತಿಗೆ ಸಂಬಂಧಿಸಿದಂತೆ ನಕ್ಷೆ ಖಾತೆ ಬದಲಾವಣೆ ಪ್ರತಿವಾದಿ 2 ಮತ್ತು 3ರವರ ಹೆಸರಿಗೆ ಅಗಿರುವ ಬಗ್ಗೆ ತಾವು ಏನಾದರೂ ತಾಲ್ಲೂಕು ಕಛೇರಿಗೇ ಭೇಟಿ ನೀಡಿ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕ್ರಯದ ಕರಾರು ಪತ್ರದಲ್ಲಿ ಇಷ್ಟು ತಿಂಗಳು ಅಥವಾ ಇಂತಿಷ್ಟು ವರ್ಷಗಳ ಒಳಗೆ ಕರಾರು ಪತ್ರ ಮಾಡಿಕೊಡುವುದಾಗಿ ನಿಪಿ-1ರಲ್ಲಿ ನಮೂದು ಮಾಡಿದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಯರಿಗೆ ನೀಡಿದ ಕೈ ಸಾಲದ ಭದ್ರತೆಗಾಗಿ ನಿಪಿ-1 ಕ್ರಯ ಕರಾರು ಪತ್ರವನ್ನು ಮಾಡಿಕೊಂಡಿದ್ದರಿಂದ ಸದರಿ ಕರಾರು ಪತ್ರದಲ್ಲಿ ಇಂತಿಷ್ಟು ದಿನದ ಒಳಗೆ ಕ್ರಯ ಪತ್ರ ಮಾಡಿಕೊಡಬೇಕೆಂಬ ಷರತ್ತನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಬಳಿ ಬಂದು ಈಗಾಗಲೇ 1,50,000/- ಸಾವಿರ ಹಣ ನಿಮಗೆ ಮರುಪಾವತಿ ಮಾಡಿದ್ದೇವೆ ಇನ್ನುಳಿಕೆ ಹಣವನ್ನು ನಾವು ತಮಗೆ ಕೊಡಲು ಸಿದ್ದರಿದ್ದೇವೆ ನಮ್ಮ ವಿರುದ್ದ ದಾವೆಯನ್ನು ಮುಂದುವರೆಸಬೇಡಿ ಎಂದು ಹೇಳಿದ್ದರು ಎಂದರೆ ಸರಿ. ಪ್ರಸ್ತುತ ದಾವಾ ಅಸ್ತಿಯ 1 ಗುಂಟೆಗೆ ಬೆಲೆ 2 ಲಕ್ಷಕ್ಕೂ ಅಧಿಕ ಇದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ನಾವು

ಕರಾರು ಪತ್ರ ಮಾಡಿಕೊಳ್ಳುವಾಗ ಕರಾರು ಪತ್ರದಲ್ಲಿ ನಮೂದಿಸಿದ ಬೆಲೆ ಅಷ್ಟೆ ಇತ್ತು ಎಂದು ಹೇಳುತ್ತಾರೆ. ಕರಾರು ಪತ್ರ ಆಗುವ ಸಮಯಕ್ಕೂ ಸಹ ಅವ್ವೇರಹಳ್ಳಿ ಗ್ರಾಮದ ವ್ಯಾಪ್ತಿಯ 1 ಗುಂಟೆ ಜಮೀನಿಗೆ ಕನಿಷ್ಟ 50 ಸಾವಿರ ಮಾರುಕಟ್ಟೆ ಬೆಲೆ ಇತ್ತು ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ಹಣದ ಭದ್ರತೆಗಾಗಿ ಮಾಡಿಕೊಂಡಿದ್ದರು ಹೇಗಾದರೂ ಮಾಡಿ ಪ್ರತಿವಾದಿಯರಿಗೆ ಸೇರಿದ ಆಸ್ತಿಯನ್ನು ಲಪಾಟಾಯಿಸಬೇಕೆಂಬ ಉದ್ದೇಶದಿಂದ ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವಾ ಸರ್ವೆ ನಂಬರ್ ಆಸ್ತಿಯನ್ನು ಹೊರತು ಪಡಿಸಿ ಬೇರೆ ಯಾವ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ